ವರಾನ್ವೇಷಣೆಯಲ್ಲಿದ್ದಾರೆಂದು ಈಗ ಪ್ರಸ್ತುತ ಗಂಡೊಂದು ಬರುವುದರಿಂದ ತಾನಲ್ಲಿಗೆ ಹೋಗಬೇಕಾಗಿರುವ ಅನಿವಾರ್ಯತೆಯನ್ನವಳು ಹೇಳಿದಳು. 'ಆ ಗಂಡು ಒಪ್ಪಿಗೆಯಾದ್ರೆ ಮದುವೆಯಾಗ್ತೀಯ?' ಎಂದು ಕೇಳಿದರು. 'ಹುಂ' ಶುಷ್ಕವಾಗಿ ಅವಳ ದನಿಯಿಂದಲೇ ಅವಳಿಗಿದು ಇಷ್ಟವಿಲ್ಲನೆನಿಸಿತವರಿಗೆ. 'ಹಾಗಾದರೆ ಸಂಗೀತಾಭ್ಯಾಸದ ಗತಿ?' ಎಂದರು. 'ಅದೇ ನನಗೆ ಚಿಂತೆಯಾಗಿದೆ ಅಪ್ಪಾನನ್ನು ಒಪ್ಪಿಸುವುದೇ ಕಷ್ಟವಾಗಿದೆ' ಎಂದಳು.

'ನೋಡೋಣ ದೈವೇಚ್ಛೆ ಏನಿದೆಯೋ?' ಎಂದು ಸುಮ್ಮನಾದರೂ ಮನಸ್ಸು ಸುಮ್ಮನಾಗಲಿಲ್ಲ. ತನಗಿದ್ದ ಒಬ್ಬನೇ ಮಗ, ಕುಲೋದ್ಧಾರಕ ಸಾರಂಗ್ ಅವನಮ್ಮನ ಹಾಗಿನವ. ಸಂಗೀತ ಸಾಹಿತ್ಯ, ರಾಗತಾನ ಲಯ... ಯಾವುದರಲ್ಲೂ ಯಾವತ್ತೂ ಆಸಕ್ತನಲ್ಲ. ತನ್ನ ರಿಯಾಜ್‌ನ ವೇಳೆ ತನ್ನ ಕೋಣೆಯ ಬಾಗಿಲು ಗಟ್ಟಿಯಾಗಿ ಮುಚ್ಚಿಕೊಳ್ಳುವಷ್ಟು ಅರಸಿಕ. ಮುನ್ನೂರೈವತ್ತು ದಿನಗಳೂ ಕ್ಯಾಮರಾ ತಗಲಾಕಿಕೊಂಡು 'ವೈಲ್ಡ್ ಲೈಫ್ ಫೋಟೋಗ್ರಫಿ' ಎಂದು ಹೇಳುತ್ತಾ ಕಾಡುಮೇಡು, ಗುಹೆಗಹ್ವರಗಳಲ್ಲಿ ಅಲೆಯುವ ಅಲೆಮಾರಿ. ಹದಿನೈದು ದಿನಕ್ಕೋ ತಿಂಗಳಿಗೋ ಒಮ್ಮೆ ಮನೆಗೆ ಬಂದರೆ ಹೆಚ್ಚು. 'ಆ ಹಾಳು ಪ್ರಾಣಿಗಳ ಜಗಿತ ನಲಿತಗಳು ಅದೇನಷ್ಟು ಮೋಜೋ ವಯಸ್ಸಿನ ಹುಡುಗ ಇರಬೇಕಾದ್ದು ಹೀಗ?' ಎನಿಸಿ ಅದೆಷ್ಟು ಸಲ ಅಲವತ್ತುಕೊಂಡಿದ್ದಾರೋ ಅದರ ಲೆಕ್ಕವಿಲ್ಲ. ವಯಸ್ಸು ಮೂವತ್ತೆರಡಾಗುತ್ತಾ ಬಂದರೂ... ಮದುವೆಯಿಲ್ಲ ಇನ್ನೊಂದಿಲ್ಲ... ಅಥವಾ ಯಾರಾದರೂ ಹೆಣ್ಣಿನ ಸ್ನೇಹ ಗೀಹದಲ್ಲಿದ್ದಾನೋ ದೇವರೇ ಬಲ್ಲ. ಅವನನ್ನು ನೋಡಿದರೆ ಹಾಗನ್ನಿಸುವುದಿಲ್ಲ. ಸದಾ ಬಿಗಿದ ಮುಖ. ಹೊಲಿದ ತುಟಿಗಳು, ಒಂಚೂರು ನಗೆಯ ಸಿಂಚನವೂ ಇಲ್ಲದ ಗಲ್ಲ, ಕೆನ್ನೆಗಳು, ಆಸ್ಥೆಯಿರದ ಉಡಾಫೆ ದಿರಿಸು. ಅದೆಷ್ಟು ದಿನಕ್ಕೊಮ್ಮೆ ಆ ಹಾಳು ಜೀನ್ಸನ್ನು ಒಗೆಯುತ್ತಾನೋ... ಪ್ರಾಣಿಗಳ ಜೊತೆ ಒಡನಾಡುವ ಹಂಬಲದಲ್ಲಿ ಅವನೂ ಥೇಟ್ ಒಂದು ಪ್ರಾಣಿಯಂತಾಗಿಬಿಟ್ಟನೆಂದು ಅವರ ಯಾವತ್ತೂ ಅನಿಸಿಕೆಯಲ್ಲ, ನಂಬಿಕೆ. ಇಂತಹ ಮುಖೇಡಿ ಮುಸುವನಂತಹ ಧಾಂಡಿಗ ಗಂಡನ್ನು ಯಾವ ಹೆಣ್ಣು ಯಾಕಾದರೂ ಒಲಿದಾಳು ಎನ್ನಿಸಿದರೂ... ಪಾಪ... ನೋಡಲು ತೆಗೆದುಹಾಕುವಂಥದ್ದೇನೂ ಇಲ್ಲ. ಲಕ್ಷಣವಾಗೇ ಇದ್ದಾನೆ. ಅವನ ತಾಯಿಂದ ಒಂದಿಷ್ಟು ಮುಖಲಕ್ಷಣ ಗೌರವರ್ಣಗಳು ಬಂದಿರಬೇಕು ಎಂದುಕೊಂಡರು. ಅವನು ಎಲ್ಲಿಗೆ ಯಾವಾಗ ಯಾಕಾಗಿ ಹೋಗುವನೋ ಯಾವಾಗ ಬರುತ್ತಾನೋ ಅವರಿಗೆ ಯಾವತ್ತು ಗೊತ್ತಿರಲಿಲ್ಲ. ಅದರ ಬಗ್ಗೆ ಅವರು ತಲೆ ಕೆಡಿಸಿಕೊಂಡವರೂ ಅಲ್ಲ.

ಆ ಹುಡುಗಿ ವಾರಣಾಸಿಗೆ ಹೋದ ರಾತ್ರಿಗೆ ಅವನು ಬಂದ. ಇದ್ದಕ್ಕಿದ್ದಂತೆ ಗಾಯಕವಾಡರಿಗೆ ತಮ್ಮ ಪಿತೃತ್ವದ ಕುರಿತು, ಆ ಜವಾಬ್ದಾರಿಗಳ ಕುರಿತು ಎಚ್ಚರವಾಯಿತು. ಪಾಪ ಪಾರ್ವತಿ ಇದ್ದಿದ್ದರೆ ಅವನನ್ನು ಹೀಗಿರ ಬಿಡುತ್ತಿದ್ದಳೆ? ಇಷ್ಟರಲ್ಲಿ ಚೆಂದದ್ದೊಂದು ಹೆಣ್ಣು ನೋಡಿ ಗಂಟು ಹಾಕಿ ಅವನನ್ನು ಬದುಕಿಗೆ ತೊಡಗಿಸಿ ಬಿಡುತ್ತಿದ್ದಳು ಎಂದುಕೊಂಡರು. ರಾತ್ರಿ ಸೋನಮ್ಮ ಊಟ ಬಡಿಸಿ ಹೊರಟ ಮೇಲೆ ಎಂದೂ ಇರದ ಕಕ್ಕುಲತೆಯಿಂದ ಮಗನನ್ನು ಹತ್ತಿರ ಕೂರಿಸಿಕೊಂಡು, 'ಸಾರಂಗ್ ನೀನು ಈಗ ಏನು ಮಾಡುತ್ತಿದ್ದಿ?' ಎಂದು ಕೇಳಿದರು. ತುಸು ಕಾಲ ಮೌನವಾಗಿದ್ದವನು, 'ಈಗ ದಾಂಡೇಲಿ ಅರಣ್ಯದಲ್ಲಿ ಒಂದು ಪ್ರಾಜೆಕ್ಟ್‌ನಲ್ಲಿರುವೆ. ಹುಲಿಗಳ ಜೀವನ ಶೈಲಿಯ ಫೋಟೋಗ್ರಫಿಗಾಗಿ' ಎಂದ. 'ಅದು ಸರಿ ಮರಿ, ನೀನು ಮದ್ವೆ ಗಿದ್ವೆ ಆಗಲ್ವೇನೋ? ಎಂದರು. 'ಸದ್ಯಕ್ಕೆ ಬೇಡ' ಎಂದ. 'ಯಾಕೆ? ಈಗ್ಯಾಕೆ ಬೇಡ ಹೇಳು? ನಿನಗೇನು ಇನ್ನೂ ಇಪ್ಪತ್ತೈದು ವರ್ಷವಾ? ಈ ಕಾರ್ತಿಕಕ್ಕೆ ಮೂವತ್ತಮೂರು ಆಗಿಬಿಡುತ್ತೆ' ಎಂದರು ಅನುನಯಿಸುತ್ತಾ.